# ನಗರಸಭೆ ಕಾರ್ಯಾಲಯ, ರಾಮನಗರ.

ನಂ: ವಿಶೇಷ ಸಭೆ / 01/09-10 ದಿನಾಂಕ : 02-06-2009.

ದಿನಾಂಕ: 02-06-2009ರ ಮಂಗಳವಾರ ಬೆಳಿಗ್ಗೆ 11.30 ಘಂಟೆಗೆ ನಗರಸಭೆಯ ಪ್ರಶಸ್ತಿ ಭವನದಲ್ಲಿ ಶ್ರೀ. ಸೋಮಶೇಖರ್ ರಾವ್ ಅಧ್ಯಕ್ಷರು ನಗರಸಭೆ ರಾಮನಗರ ರವರ ಅಧ್ಯಕ್ಷತೆಯಲ್ಲಿ ನಡೆದ ವಿಶೇಷ ಸಭೆಯ ನಡವಳಿಗಳು

| | | |
|---|---|---|
| ಹಾಜರಿ :27 | ಗೈರು ಹಾಜರಿ : 09 | ಒಟ್ಟು - 36 |
| ೩೩೩ | ೩೩೩ | ೩೩೩ |

ಸಭೆ ಪ್ರಾರಂಭಕ್ಕೆ ಪೌರಾಯುಕ್ತರು ಸಭೆಯಲ್ಲಿ ಹಾಜರಿದ್ದ ಅಧ್ಯಕ್ಷರು, ಉಪಾಧ್ಯಕ್ಷರು ಮತ್ತು ಸದಸ್ಯರನ್ನು ಮತ್ತು ಸಭೆಗೆ ಆಗಮಿಸಿದ ಅಧಿಕಾರಿಗಳನ್ನು ಹಾಗೂ ಪತ್ರಕರ್ತರನ್ನು ಸ್ವಾಗತಿಸಿದರು ನಂತರ ಸಭೆ ಪ್ರಾರಂಭಿಸುವಂತೆ ಅಧ್ಯಕ್ಷರನ್ನು ಕೋರಲಾಯಿತು.

ವಿಷಯ:- 1 2009-10ನೇ ಸಾಲಿಗೆ ನಗರಸಭಾ ನಿಧಿಯಲ್ಲಿ ಶೇ. 18ರ ಬಾಬಿಗಾಗಿ ಕಾದಿರಿಸಲಾಗಿರುವ ರೂ. 36.00 ಲಕ್ಷ ರೂ.ಗಳಿಗೆ ಕ್ರಿಯಾ ಯೋಜನೆ ತಯಾರಿಸಿ ಅನುಮೋದಿಸುವ ವಿಚಾರ (ದಿನಾಂಕ. 28-02-2009 ರ ಸಭೆಯಲ್ಲಿ ಮುಂದುವರೆಸಿದ ವಿಷಯವಾಗಿರುತ್ತದೆ)

ತೀರ್ಮಾನ:-1.ವಿಷಯದ ಬಗ್ಗೆ ಸಭೆಯು ಸುದೀರ್ಘವಾಗಿ ಚರ್ಚಿಸಿತು. ಸರ್ಕಾರವು 2008-09ನೇ ಸಾಲಿಗೆ ಎಸ್.ಎಫ್.ಸಿ (ಮುಕ್ತನಿಧಿ) ಅನುದಾನ ರೂ.497.92 ಲಕ್ಷಗಳನ್ನು ನಿಗದಿಪಡಿಸಿ ಆದೇಶಿಸಲಾದ ಮೇರೆಗೆ ರೂ. 89.62 ಲಕ್ಷಗಳನ್ನು ಶೇ. 18ರ ಕಾರ್ಯಕ್ರಮಗಳಿಗೆ ಅಳವಡಿಸಿ ಕೌನ್ಸಿಲ್ ಅನುಮೋದನೆಯೊಡನೆ ಮಾನ್ಯ ಜಿಲ್ಲಾಧಿಕಾರಿಗಳವರಿಂದ ಆಡಳಿತಾತ್ಮಕ ಮಂಜೂರಾತಿ ಪಡೆದು ಕ್ರಿಯಾ ಯೋಜನೆಯನ್ನು ಅನುಷ್ಠಾನಗೊಳಿಸಲಾಗಿರುತ್ತದೆ. ಆದರೆ 2008-09ರ ವರ್ಷಾಂತ್ಯಕ್ಕೆ ರೂ. 290.82 ಲಕ್ಷಗಳು ಮಾತ್ರ ಬಿಡುಗಡೆಯಾಗಿದ್ದು ಆ ಪ್ರಕಾರ ಶೇ.18ರ ಕಾರ್ಯಕ್ರಮಗಳಿಗಾಗಿ ರೂ.89.62 ಲಕ್ಷಗಳಿಂದ ರೂ.52.34 ಲಕ್ಷಗಳಿಗೆ ಸೀಮಿತಗೊಳಸಬೇಕಾಗಿರುತ್ತದೆ. ಈಗಾಗಲೆ ಯೋಜನೆಗಳನ್ನು ಅನುಷ್ಠಾನಗೊಳಿಸಿರುವುದರಿಂದ ಕೊರತೆ ಬೀಳುವ ರೂ.37.28 ಲಕ್ಷಗಳಿಗೆ ಪ್ರತ್ಯೇಕ ವ್ಯವಸ್ಥೆ ಮಾಡಬೇಕಾಗಿರುವುದರಿಂದ ಈ ಯೋಜನೆಗಳನ್ನು 2009-10ನೇ ಸಾಲಿನ ನಗರಸಭಾ ನಿಧಿಯಲ್ಲಿ ಶೇ.18ರ ಬಾಬಿಗೆ ಕಾಯ್ದಿರಿಸಿರುವ ರೂ.36.00 ಲಕ್ಷಗಳಲ್ಲಿ ತೆಗೆದುಕೊಳ್ಳುವುದೆಂದು ತೀರ್ಮಾನಿಸಲಾಯಿತು. (ಹೆಚ್ಚುವರಿ ಮೊಬಲಗು ರೂ. 1.28 ಲಕ್ಷಗಳನ್ನು ನಗರಸಭಾ ನಿಧಿಯಿಂದ ಭರಿಸುವ ಮೇರೆಗೆ)

ಮುಂದುವರೆಯುತ್ತಾ ಆಡಳಿತಾತ್ಮಕ ಮಂಜೂರಾತಿ ದೊರೆತಿರುವ ಕ್ರಿಯಾ ಯೋಜನೆಯಲ್ಲಿನ ಆರ್ಥಿಕಾಭಿವೃದ್ಧಿ ಕಾರ್ಯಕ್ರಮದ "**ಪ.ಜಾ/ಪ.ಪಂ.ದ ಅರ್ಹತೆಹೊಂದಿರುವ ನಿರುದ್ಯೋಗಿ ಇಬ್ಬರು ಯುವಕರಿಗೆ ನಗರಸಭೆ ವ್ಯಾಪ್ತಿಯಲ್ಲಿ ಸ್ವಂತ ಲೈಬ್ರರಿ ನಡೆಸಲು (Circulating Library)ಪುಸ್ತಕ**

**ಖರೀದಿಸಿ ನೀಡುವುದು .ಅಂದಾಜು ರೂ. 4.00 ಲಕ್ಷ**"ಗಳನ್ನು ಅಳವಡಿಸಿಕೊಂಡಿದ್ದು ಸದರಿ ಕಾರ್ಯಕ್ರಮಕ್ಕೆ ಸಂಬಂಧಿಸಿದಂತೆ 2 ಬಾರಿ ಅರ್ಜಿ ಆಹ್ವಾನಿಸಿದ್ದರೂ ಅರ್ಹ ಅಭ್ಯರ್ಥಿಗಳು ಲಭ್ಯವಾಗದ ಕಾರಣ ಸದರಿ ಯೋಜನೆಯನ್ನು ಮತ್ತು " **ನಗರಸಭೆ ವ್ಯಾಪ್ತಿಯಲ್ಲಿ ಬರುವ ಪ.ಜಾ/ಪ.ಪಂ.ದ ಸಾಹಿತಿಗಳನ್ನು ಪ್ರೋತ್ಸಾಹಿಸಿ ಲೇಖನ/ಕವನ/ಕಥೆ/ ನಾಟಕ/ವಿಚಾರ ಸಾಹಿತ್ಯ/ಕಾದಂಬರಿ/ ಇತ್ಯಾದಿ ಪ್ರಕಟಿಸಲು ಸಹಾಯ ಮಾಡುವುದು ದಾಜು ರೂ. 2.00 ಲಕ್ಷ**"ಗಳನ್ನು ಅಳವಡಿಸಿಕೊಂಡಿದ್ದು, 2 ಬಾರಿ ಅರ್ಜಿ ಆಹ್ವಾನಿಸಲಾಗಿ ಒಬ್ಬರು ಮಾತ್ರ ಆಯ್ಕೆಯಾಗಿದ್ದು ಈ ಬಾಬ್ತು ಈ ಖರ್ಚು ರೂ.40,000/- ಗಳನ್ನು ಕಳೆದು ಜಾಥಾ ರೂ.1.60 ಲಕ್ಷಗಳಿಗೆ ಬದಲಿ ಯೋಜನೆ ತೆಗೆದುಕೊಂಡಿರುವುದನ್ನು ಸಭೆಯು ಸರ್ವಾನುಮತದಿಂದ ಒಪ್ಪಿ ತೀರ್ಮಾನಿಸಿತು. ಪ್ರಸ್ತಾವನೆಗೆ ಅನುಮೋದನೆ ದೊರಕಿಸಿಕೊಡಲು ಜಿಲ್ಲಾಧಿಕಾರಿಗಳನ್ನು ಕೋರಿಕೊಳ್ಳುವುದೆಂದು ತೀರ್ಮಾನಿಸಿಲಾಯಿತು.

**ಶೈಕ್ಷಣಿಕ ಕಾರ್ಯಕ್ರಮಗಳು**

| ಕ್ರ. ಸಂ. | ಯೋಜನೆಯ ವಿವರ | ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ) | ಷರಾ |
|---|---|---|---|
| 1. | ನಗರಸಭೆ ವ್ಯಾಪ್ತಿಯಲ್ಲಿ ಸಮಾಜ ಕಲ್ಯಾಣ ಇಲಾಖೆವತಿಯಿಂದ ನಡೆಯುತ್ತಿರುವ ಬಿ.ಎಂ.ರಸ್ತೆಯಲ್ಲಿರುವ (ಗೌಸಿಯಾ ಕಾಲೇಜ್ ಮುಂಭಾಗ)ಪ.ಜಾ./ಪ.ಪಂ.ದ ಮೆಟ್ರಿಕ್ ಪೂರ್ವ ವಿದ್ಯಾರ್ಥಿ ನಿಲಯಕ್ಕೆ 800 LPD ಸೋಲಾರ್ ವಾಟರ್ ಹೀಟರ್ ಮತ್ತು ಸೋಲಾರ್ ಲೈಟ್ ವ್ಯವಸ್ಥೆ ಮಾಡುವುದು. | 6.00 | ಮಾನ್ಯ ಜಿಲ್ಲಾಧಿಕಾರಿಗಳವರ ಅಧಿಕೃತ ಜ್ಞಾಪನಾ ಸಂ ರಾಜಿಕ/ಎಂಯುಎನ್/(2)/ ಸಿಆರ್/218/08-09, ದಿನಾಂಕ. 10-11-08 ರಂತೆ ಆಡಳಿತಾತ್ಮಕ ಮಂಜೂರಾತಿ ದೊರೆತಿರುತ್ತದೆ. |
| 2 | ಹೈಸ್ಕೂಲ್ ಮಕ್ಕಳಿಗೆ ವಿದ್ಯಾಭ್ಯಾಸದ ಅನುಕೂಲಕ್ಕಾಗಿ ಇಂಗ್ಲೀಷ್-ಕನ್ನಡ ನಿಘಂಟು(Dictionary),ಜಾಮಿಟ್ರಿ ಬಾಕ್ಸ್ ಮತ್ತು ನೋಟ್ ಬುಕ್ಸ್ ಗಳನ್ನು ಖರೀದಿಸಿ ನೀಡುವುದು. (0.75+0.50+1.50 ಲಕ್ಷಗಳು | 2.75 | |
| 3. | **ವಿವಿಧ ತರಗತಿಗಳಲ್ಲಿ ವ್ಯಾಸಂಗ ಮಾಡುತ್ತಿರುವ ಪ.ಜಾ/ಪ.ಪಂ.ದ ವಿದ್ಯಾರ್ಥಿಗಳಿಗೆ** 1 ರಿಂದ 10ನೇ ತರಗತಿ ಮಕ್ಕ ಳಿಗೆ ಬ್ಯಾಗ್ ವಿತರಿಸುವುದು | 1.60 | |
| 4 | 6-12 ವರ್ಷದೊಳಗಿನ ಮಕ್ಕಳಿಗೆ ಸ್ಪರ್ಧಾಸ್ಮಕ ಮನೋಭಾವ ಮತ್ತು ವ್ಯಕ್ತಿತ್ವ ವಿಕಸನ ತರಬೇತಿ ಕೊಡಿಸುವುದು(ಮಕ್ಕಳಿಗೆ ತಗಲುವ ಫೀ ಪಾವತಿಸುವುದು) | 3.00 | |
| 5 | ಪ.ಜಾ/ಪ.ಪಂ.ದ ವಿದ್ಯಾರ್ಥಿ ನಿಲಯಗಳಿಗೆ ಪಿ.ಯು.ಸಿ ಮತ್ತು ಪದವಿ ಪಠ್ಯಪುಸ್ತಕಗಳನ್ನು ಖರೀದಿಸಿ ನೀಡುವುದು. | 1.25 | ಹೊಸದಾಗಿ ಯೋಜನೆ ರೂಪಿಸಲಾಗಿರುತ್ತದೆ. ಹಾಗೂ ಆಡಳಿತಾತ್ಮಕ ಮಂಜೂರಾತಿ ದೊರಕಿಸಿಕೊಡಬೇಕಾಗಿರುತ್ತದೆ. |
| | **ಒಟ್ಟು** | **14.60** | |

## ಆರ್ಥಿಕಾಭಿವೃದ್ಧಿ ಕಾರ್ಯಕ್ರಮಗಳು

| | | | |
|---|---|---|---|
| 1 | ವಾರ್ಡ್ ನಂ. 2 ರ ಅಂಬೇಡ್ಕರ್ ನಗರದಲ್ಲಿ ಹಾಲಿ ಇರುವ ಪೌರಕಾರ್ಮಿಕ ಫಲಾನುಭವಿಗಳ ಖಾಲಿ ನಿವೇಶನದಲ್ಲಿ ಮನೆಗಳ ನಿರ್ಮಾಣ | 9.95 | ಮಾನ್ಯ ಜಿಲ್ಲಾಧಿಕಾರಿಗಳವರ ಅಧಿಕೃತ ಜ್ಞಾಪನಾ ಸಂ : ರಾಜಿಕ/ ಎಂಯುಎನ್/(2)/ಸಿಆರ್/218/08-09, ದಿನಾಂಕ. 10-11-08 ರಂತೆ ಆಡಳಿತಾತ್ಮಕ ಮಂಜೂರಾತಿ ದೊರೆತಿರುತ್ತದೆ |
| 2. | ಪ.ಜಾ/ಪ.ಪಂ.ದ ಬಿ.ಪಿ.ಎಲ್ ಕುಟುಂಬದವರು ನಿಧನರಾದಾಗ ಶವ ಸಂಸ್ಕಾರಕ್ಕೆ ತಲಾ 5,000/- ರೂ.ನಂತೆ ಧನಸಹಾಯ ನೀಡುವುದು. | 1.10 | ಹೊಸದಾಗಿ ಯೋಜನೆ ರೂಪಿಸಲಾಗಿರುತ್ತದೆ.ಹಾಗೂ ಆಡಳಿತಾತ್ಮಕ ಮಂಜೂರಾತಿ ದೊರಕಿಸಿಕೊಡಬೇಕಾಗಿರುತ್ತದೆ. |
| 3. | ಪ.ಜಾ/ಪ.ಪಂ.ದವರು ವಿವಿಧ ರೀತಿಯ ಮಾರಾಣಾಂತಿಕ ರೋಗಗಳಿಗೆ ,ಎಲ್ಲಾ ತರಹದ ಶಸ್ತ್ರ ಚಿಕಿತ್ಸೆ, ಮತ್ತು ಕಾಯಿಲೆಗಳಿಗೆ ವೈದ್ಯಕೀಯ ವೆಚ್ಚಕ್ಕಾಗಿ ಸಹಾಯ ಧನ ನೀಡುವುದು. (ಆಸ್ಪತ್ರೆಗಳಿಗೆ) | 2.00 | |
| 4. | ಪ.ಜಾ/ಪ.ಪಂ.ದ ಪೌರಕಾರ್ಮಿಕರಿಗೆ ಸುರಕ್ಷಿತಾ ಸಾಧನ ಒದಗಿಸುವದು. | 1.25 | |
| | **ಒಟ್ಟು** | **14.30** | |

## ಇತರೆ ಕಾರ್ಯಕ್ರಮಗಳು

| | | | |
|---|---|---|---|
| 1 | ವಾರ್ಡ್ ನಂ.2ರ ಅಂಬೇಡ್ಕರ್ ನಗರದಲ್ಲಿ 2ನೇ ಕ್ರಾಸ್ ಮತ್ತು ಚರಂಡಿ ರಸ್ತೆ ನಿರ್ಮಾಣ. | 3.00 | ಮಾನ್ಯ ಜಿಲ್ಲಾಧಿಕಾರಿಗಳವರ ಅಧಿಕೃತ ಜ್ಞಾಪನಾ ಸಂ : ರಾಜಿಕ/ ಎಂಯುಎನ್/(2)/ಸಿಆರ್/218/08-09, ದಿನಾಂಕ. 10-11-08 ರಂತೆ ಆಡಳಿತಾತ್ಮಕ ಮಂಜೂರಾತಿ ದೊರೆತಿರುತ್ತದೆ |
| 2 | ವಾರ್ಡ ನಂ. 26ರ ಇಂದಿರಾನಗರ ಶಿವಣ್ಣ ಮನೆ ಹತ್ತಿರ ಮತ್ತು ದರ್ಗಾ ಪಕ್ಕದಲ್ಲಿ ಕಾಂಕ್ರೀಟ್ ರಸ್ತೆ ನಿರ್ಮಾಣ. | 3.00 | |
| 3 | ವಾರ್ಡ್ ನಂ. 17 ರ ಬಾಲಗೇರಿಯ ಕೊಲ್ಲಾಪುರದಮ್ಮ ದೇವಸ್ಥಾನದ ಹತ್ತಿರ ಚರಂಡಿ ಕಾಮಗಾರಿ | 2.00 | |
| | **ಒಟ್ಟು** | **8.00** | |

ವಿಷಯ ( 2 ) :- ಸರ್ಕಾರವು 2008-09ನೇ ಸಾಲಿಗೆ ಎಸ್.ಎಫ್.ಸಿ (ಮುಕ್ತನಿಧಿ) ಅನುದಾನ 497.92 ಲಕ್ಷಗಳನ್ನು ನಿಗಧಿಪಡಿಸಿ ಆದೇಶಿಸಲಾದ ಮೇರೆಗೆ ಕೆ.ಯು.ಐ.ಡಿ.ಎಫ್.ಸಿ ಸಾಲಕ್ಕಾಗಿ 50.90 ಲಕ್ಷಗಳನ್ನು ಉಳಿಸಿ ಬಾಕಿ 447.02 ಲಕ್ಷಗಳಲ್ಲಿ 89.62 ಲಕ್ಷಗಳನ್ನು ಶೇ.18ರ ಕಾರ್ಯಕ್ರಮಗಳಿಗೆ ಮತ್ತು 357.40 ಲಕ್ಷಗಳನ್ನು ಇತರೆ ಅಭಿವೃದ್ಧಿ ಕಾರ್ಯಕ್ರಮಗಳಿಗೆ ಕೌನ್ಸಿಲ್ ಅನುಮತಿಯೊಡನೆ ಜಿಲ್ಲಾಧಿಕಾರಿ ಗಳವರಿಂದ ಆಡಳಿತಾತ್ಮಕ ಮಂಜೂರಾತಿ ಪಡೆದು ಕ್ರಿಯಾ ಯೋಜನೆಯನ್ನು ಅನುಷ್ಠಾನ ಗೊಳಿಸಲಾಗಿರುತ್ತದೆ. ಆದರೆ 2008-09ರ ವರ್ಷಾಂತ್ಯಕ್ಕೆ ರೂ. 290.82 ಲಕ್ಷಗಳು ಮಾತ್ರ ಬಿಡುಗಡೆಯಾಗಿದ್ದರೂ ರೂ. 156.20 ಲಕ್ಷಗಳ ಕೊರತೆ ಬೀಳುವುದಾಗಿರುತ್ತದೆ. ಈ ಪ್ರಕಾರ ಶೇ. 18 ರ ಕಾರ್ಯಕ್ರಮಗಳಿಗಾಗಿ 89.62 ಲಕ್ಷಗಳಿಂದ ರೂ. 52.34 ಲಕ್ಷಗಳಿಗೂ ಮತ್ತು ಇತರೆ ಅಭಿವೃದ್ಧಿ ಕಾಮಗಾರಿಗಳ ಬಾಬ್ತು ರೂ. 357.40 ಲಕ್ಷಗಳಿಂದ ರೂ. 238.48 ಲಕ್ಷಗಳಿಗೆ ಯೋಜನೆಯನ್ನು ಕಡಿತಗೊಳಿಸಬೇಕಾಗಿರುತ್ತದೆ. ಈ ಬಗ್ಗೆ ಚರ್ಚಿಸಿ ತೀರ್ಮಾನ ಕೈಗೊಳ್ಳುವ ವಿಚಾರ.

ತೀರ್ಮಾನ :-2. ವಿಷಯವನ್ನು ಪರಿಶೀಲಿಸಲಾಯಿತು ಆಡಳಿತಾತ್ಮಕ ಮಂಜೂರಾತಿ ದೊರೆತಿರುವ ರೂ.89.62 ಲಕ್ಷಗಳ ಕ್ರಿಯಾ ಯೋಜನೆಯಲ್ಲಿ ರೂ. 52.72 ಲಕ್ಷಗಳ ಯೋಜನೆಯನ್ನು ಉಳಿಸಿಕೊಂಡು (ಹೆಚ್ಚುವರಿ ರೂ. 38,000/- ಗಳನ್ನು ನಗರಸಭಾ ನಿಧಿಯಿಂದ ಭರಿಸಲು) ಬಾಕಿ ರೂ. 36.90 ಲಕ್ಷಗಳ ಯೋಜನೆಯನ್ನು 2009-10ನೇ ಸಾಲಿನ ನಗರಸಭಾ ನಿಧಿಯಲ್ಲಿ ಶೇ.18ರ ಬಾಬಿನಲ್ಲಿ (ರೂ. 36.00 ಲಕ್ಷಗಳನ್ನು ಕಾದಿರಿಸಿದ್ದು) ಖರ್ಚು ನಿರ್ವಹಿಸುವುದೆಂದು (ಹೆಚ್ಚುವರಿ ರೂ. 90,000/- ಗಳನ್ನು ನಗರಸಭಾ ನಿಧಿಯಿಂದ ಭರಿಸಲು) ಸಭೆಯಲ್ಲಿ ಸರ್ವಾನುಮತದಿಂದ ತೀರ್ಮಾನಿಸಲಾಯಿತು ಹಾಗೂ ಇತರೆ ಅಭಿವೃದ್ಧಿ ಕಾರ್ಯಕ್ರಮಗಳ ಬಾಬ್ತು ಕೊರತೆ ಬೀಳುವ ರೂ. 118.92 ಲಕ್ಷಗಳನ್ನು 2009-10ನೇ ಸಾಲಿಗೆ ಸರ್ಕಾರವು ಬಿಡುಗಡೆ ಮಾಡುವ ಎಸ್.ಎಫ್.ಸಿ (ಮುಕ್ತನಿಧಿ) ಅನುದಾನದಲ್ಲಿ ಖರ್ಚು ಭರಿಸಲು ಸರ್ವಾನುಮತದಿಂದ ತೀರ್ಮಾನಿಸಲಾಯಿತು ಪ್ರಸ್ತಾವನೆಗೆ ಅನುಮೋದನೆ ದೊರಕಿಸಿಕೊಡಲು ಜಿಲ್ಲಾಧಿಕಾರಿಗಳನ್ನು ಕೋರಿಕೊಳ್ಳುವುದೆಂದು ತೀರ್ಮಾನಿಸಿಲಾಯಿತು. ಎಸ್.ಎಫ್.ಸಿ(ಮುಕ್ತನಿಧಿ) ಅನುದಾನದಲ್ಲಿ ಮಂಜೂರಾಗಿರುವ ಕ್ರಿಯಾ ಯೋಜನೆಯಂತೆ ರೂ..52.72 ಲಕ್ಷಗಳಿಗೆ ಉಳಿಸಿಕೊಂಡಿರುವ ಕಾರ್ಯಕ್ರಮಗಳ ವಿವರ ಈ ಕೆಳಕಂಡಂತಿರುತ್ತದೆ. (ಹೆಚ್ಚುವರಿ ರೂ .0.34 ಲಕ್ಷಗಳನ್ನು ನಗರಸಭೆ ನಿಧಿಯಿಂದ ಭರಿಸುವ ಮೇರೆಗೆ)

| ಕ್ರ. ಸಂ. | ಶೈಕ್ಷಣಿಕ ಕಾರ್ಯಕ್ರಮಗಳು | ಅಂದಾಜು ಮೊತ್ತ ರೂ. ಲಕ್ಷಗಳಲ್ಲಿ | ಷರಾ |
|---|---|---|---|
| 1 | ಪ್ರೈಮರಿ ಮತ್ತು ಹೈಯರ್ ಪ್ರೈಮರಿ (1 ರಿಂದ 7ನೇ ತರಗತಿ)ಮಕ್ಕಳಿಗೆ ಶಾಲಾ ಸಮವಸ್ತ್ರ ನೀಡುವುದು.- | 3.00 | ಮಾನ್ಯ ಜಿಲ್ಲಾಧಿಕಾರಿಗಳವರ ಅಧಿಕೃತ ಜ್ಞಾಪನಾ ಸಂ : ರಾಜಿಕ/ಎಂಯುಎನ್/ (2)/ಸಿಆರ್/218/08-09, ದಿನಾಂಕ. 10-11-08 ರಂತೆ ಆಡಳಿತಾತ್ಮಕ ಮಂಜೂರಾತಿ ದೊರೆತಿರುತ್ತದೆ. |
| 2 | ವಿವಿಧ ತರಗತಿಯ ವಿದ್ಯಾರ್ಥಿಗಳಿಗೆ ಇಂಗ್ಲೀಷ್ Speaking Course ತರಬೇತಿಗೆ ಫೀ ಪಾವತಿಸುವುದು. | 1.00 | |
| 3. | ನಗರಸಭಾ ವ್ಯಾಪ್ತಿಯಲ್ಲಿ ವಿವಿಧ ಕ್ರೀಡಾ ಸ್ಪರ್ದೆಗಳಿಗೆ ಆಯ್ಕೆಯಾಗಿರುವ (ಜಿಲ್ಲಾ ರಾಜ್ಯ ಮಟ್ಟದ) ಪ.ಜಾ/ಪ.ಪಂ.ದ ಸ್ಪರ್ದಿಗಳಿಗೆ ಕ್ರೀಡಾ ಸಾಮಾಗ್ರಿ/ಅನುಕೂಲ ಕಲ್ಪಿಸಲು | 1.00 | |
| 4. | ವಾರ್ಡ್ ನಂ. 1 ರ ಕೊಂಕಾಣಿ ದೊಡ್ಡಿಯಲ್ಲಿ ಸಮುಧಾಯ ಭವನ ನಿರ್ಮಾಣ | 3.50 | |
| 5. | ವಾರ್ಡ್ ನಂ. 31ರ ಅರ್ಚಕರಹಳ್ಳಿ ಅಂಗನವಾಡಿ ಕೇಂದ್ರ ನಿರ್ಮಾಣ | 3.50 | |
| 6. | ವಾರ್ಡ್ ನಂ. 28 ರ ವಿದ್ಯಾಪೀಠ ಹರಿಜನ ಕಾಲೋನಿಯಲ್ಲಿರುವ ಸಮುಧಾಯ ಭವನದ ಮುಂಭಾಗ ಕಾಂಕ್ರೀಟ್ ನಿರ್ಮಾಣ( ಬೈರೇಗೌಡರ ಮನೆ ಪಕ್ಕ) | 1.50 | |
| 7 | ಪ.ಜಾ/ಪ.ಪಂ.ದ ಉನ್ನತ ವ್ಯಾಸಂಗ ಮಾಡುವ ವಿದ್ಯಾರ್ಥಿಗಳಿಗೆ ಧನಸಹಾಯ ಮಾಡುವುದು. (ಕಾಲೇಜು ಮೂಲಕ) ಮಿತಿ ರೂ. 15,000/- | 1.00 | ಹೊಸದಾಗಿ ಯೋಜನೆ ರೂಪಿಸಲಾಗಿರುತ್ತದೆ.ಹಾಗೂ ಆಡಳಿತಾತ್ಮಕ ಮಂಜೂರಾತಿ ದೊರಕಿಸಿಕೊಡಬೇಕಾಗಿರುತ್ತದೆ. |

| | | | |
|---|---|---|---|
| 8 | ಬೋವಿ ಕ್ಷೇಮಾಭಿವೃದ್ಧಿ ಸಂಘ, ರಾಮನಗರ ರವರ ಕಛೇರಿಗೆ ಪೀಠೋಪಕರಣ, ಕಂಪ್ಯೂಟರ್ ಮತ್ತು ಟಿ.ವಿ.ಖರೀದಿಸಿ ನೀಡುವುದು. | 0.60 | |
| 9. | ರಾಮನಗರ ಟೌನ್ ಪ.ಜಾ/ಪ.ಪಂ.ದ ಮಕ್ಕಳು ವಿದ್ಯಾಭ್ಯಾಸ ಮಾಡುತ್ತಿರುವ ಶಾಲೆಗಳಿಗೆ ಡೆಸ್ಕ್ ಒದಗಿಸುವದು. | 5.00 | |
| 10. | ಹೈಯರ್ ಪ್ರೈಮರಿ (5ರಿಂದ 7ನೇ ತರಗತಿಯವರೆಗೆ) ಕ್ಯಾನವಾಸ್ ಷೂ ಮತ್ತು 2 ಜೊತೆ ಕಾಲುಚೀಲ ಒದಗಿಸುವುದು. | 2.40 | |
| | **ಒಟ್ಟು** | **22.50** | |
| | **ಆರ್ಥಿಕಾಭಿವೃದ್ಧಿ ಕಾರ್ಯಕ್ರಮಗಳು** | | |
| 1. | ನಗರಸಭೆ ವ್ಯಾಪ್ತಿಯಲ್ಲಿ ಬರುವ ಪ.ಜಾ/ಪ.ಪಂ.ದ ಸಾಹಿತಿಗಳನ್ನು ಪ್ರೋತ್ಸಾಹಿಸಿ ಲೇಖನ/ಕವನ/ಕಥೆ/ ನಾಟಕ/ವಿಚಾರ ಸಾಹಿತ್ಯ/ಕಾದಂಬರಿ/ ಇತ್ಯಾದಿ ಪ್ರಕಟಿಸಲು ಸಹಾಯ ಮಾಡುವುದು. | 0.40 | ಮಾನ್ಯ ಜಿಲ್ಲಾಧಿಕಾರಿಗಳವರ ಅಧಿಕೃತ ಜ್ಞಾಪನಾ ಸಂ : ರಾಜಿಕ/ಎಂಯುಎನ್/ (2)/ಸಿಆರ್/218/08-09, ದಿನಾಂಕ. 10-11-08 ರಂತೆ ಆಡಳಿತಾತ್ಮಕ ಮಂಜೂರಾತಿ ದೊರೆತಿರುತ್ತದೆ. |
| 2. | ವಿದ್ಯುತ್ ಸಂಪರ್ಕ ಪಡೆಯದಿರುವ ಪ.ಜಾ/ಪ.ಪಂ.ದ ಅರ್ಹ ಫಲಾನುಭವಿಗಳಿಗೆ ವಿದ್ಯುತ್ ಸಂಪರ್ಕ ವ್ಯವಸ್ಥೆ ಕಲ್ಪಿಸುವುದು. | 3.00 | |
| 3. | 1)ಪ.ಜಾ/ಪ.ಪಂ.ದ ನಿರುದ್ಯೋಗಿ .ಯುವಕರಿಗೆ ಸ್ವಯಂ ಉದ್ಯೋಗ ಕೈಗೊಳ್ಳಲು<br>2)ಜಿಲ್ಲಾ ಸಮಾಜ ಕಲ್ಯಾಣಾಧಿಕಾರಿಗಳ ಪತ್ರ ಅನುಸರಿಸಿ ಡಾ. ಬಿ.ಆರ್. ಅಂಬೇಡ್ಕರ್ ಅಭಿವೃದ್ಧಿ ನಿಗಮ (ನಿ)ರ ಮೂಲಕ ಭೋವಿ ಕ್ಷೇಮಾಭಿವೃದ್ಧಿ ಸಂಘ ಗುರುತಿಸುವ ಅರ್ಹ ಫಲಾನುಭವಿಗಳಿಗೆ ವಿವಿಧ ಸ್ವಯಂ ಉದ್ಯೋಗ ಕೈಗೊಳ್ಳಲು ಸಹಾಯಧನ | 0.95<br>1.00 | |
| 4. | ಸ್ವಸಹಾಯ ಗುಂಪುಗಳಿಗೆ SWMಅಡಿ ಮನೆಮನೆಯಿಂದ ಕಸ ಸಾಗಿಸಲು 2 Auto Tipper ಖರೀದಿಸಿ ನೀಡುವುದು. | 5.00 | |
| 5. | ವಾರ್ಡ್ ನಂ.2ರ ಅಂಬೇಡ್ಕರ್ ನಗರದಲ್ಲಿ ವಾಸವಿರುವ ಪೌರಕಾರ್ಮಿಕರ ಮನೆಗಳ ದುರಸ್ಥಿ ಮಾಡುವುದು. | 9.95 | |
| | **ಒಟ್ಟು** | **20.30** | |

| | ಇತರೆ ಕಾರ್ಯಕ್ರಮಗಳು | | |
|---|---|---|---|
| 1. | ನಗರಸಭೆ ವ್ಯಾಪ್ತಿಯ ಪ.ಜಾ/ಪ.ಪಂ.ದ ಪ್ರದೇಶಗಳಲ್ಲಿ ಬೀದಿ ಕಂಬಗಳಿಗೆ ಸೋಡಿಯಂ ವೇಪರ್ ಲ್ಯಾಂಪ್ ಖರೀದಿಸಿ ಅಳವಡಿಸುವುದು. | 3.50 | ಮಾನ್ಯ ಜಿಲ್ಲಾಧಿಕಾರಿಗಳವರ ಅಧಿಕೃತ ಜ್ಞಾಪನಾ ಸಂ : ರಾಜಿಕ/ಎಂಯುಎನ್/ (2)/ಸಿಆರ್/218/08-09, ದಿನಾಂಕ. 10-11-08 ರಂತೆ ಆಡಳಿತಾತ್ಮಕ ಮಂಜೂರಾತಿ ದೊರೆತಿರುತ್ತದೆ. |
| 2. | ವಾರ್ಡ್ ನಂ. 21 ರ ಅರ್ಕೇಶ್ವರ ಕಾಲೋನಿಯ 3ನೇ ಅಡ್ಡರಸ್ತೆಗಳಿಗೆ ಚರಂಡಿ ನಿರ್ಮಾಣ ಮಾಡುವುದು. | 6.42 | |
| | **ಒಟ್ಟು** | **9.92** | |

**ವಿ.3.** ಯುಐಡಿಎಸ್ಎಸ್ಎಂಟಿ ಯೋಜನೆಯಲ್ಲಿ ನಂ. ನಸರಾ/ಯುಐಡಿಎಸ್ಎಸ್ಎಂಟಿ/ಜೆಇ1/1/2007-08, ದಿನಾಂಕ 17.01.2009 ರ ಮೇರೆಗೆ ಸ್ವೀಕರಿಸಿದ ಟೆಂಡರ್ ಗಳನ್ನು ಪರಿಶೀಲಿಸಿ ತೀರ್ಮಾನ ಕೈಗೊಳ್ಳುವ ವಿಚಾರ.

**ತೀ-3.** ವಿಷಯದಲ್ಲಿ ವಿವರಿಸಿರುವ ಸ್ವೀಕೃತವಾದ ಟೆಂಡರ್ ಗಳನ್ನು ಸಭೆಯಲ್ಲಿ ಓದಿ ವಿವರಿಸಲಾಯಿತು. ವಿವರ ಕೆಳಕಂಡಂತಿದೆ.

**<u>ತಾಂತ್ರಿಕ ಬಿಡ್ ನಲ್ಲಿ ಅರ್ಹತೆ ಹೊಂದಿರುವ ಟೆಂಡರ್ ಗಳು</u>**

(ರೂ .ಲಕ್ಷಗಳಲ್ಲಿ)

| ಪ್ಯಾಕೇಜ್ ಸಂಖ್ಯೆ | ಕಾಮಗಾರಿ ವಿವರ | ಅಂದಾಜು ಮೊತ್ತ | ಗುತ್ತಿಗೆದಾರರ ಹೆಸರು | ನಮೂದಿಸಿರುವ ದರ | ತಾಂತ್ರಿಕ ಬಿಡ್ ನ ಅರ್ಹತೆ / ಅನರ್ಹತೆ | 09-2008ನೇ ಸಾಲಿನ ಎಸ್.ಆರ್ ದರಕ್ಕೆ ಹೆಚ್ಚು / ಕಡಿಮೆ )ಶೇಕಡವಾರು( |
|---|---|---|---|---|---|---|
| 1 | ಎ (ವಾರ್ಡ್ ನಂ 18 .ರ ಹೊಸಹಳ್ಳಿ ಬಯಲಿನಲ್ಲಿ ಹಾಲೀ ಇರುವ ಮಣ್ಣಿನ ರಸ್ತೆ ಜಲ್ಲಿ ರಸ್ತೆ ಹಾಗೂ ಡಾಂಬರ್ ರಸ್ತೆಗಳನ್ನು ಉನ್ನತ್ತೀಕರಣ ಹಾಗೂ ಕಿರಿದಾದ ರಸ್ತೆಗಳನ್ನು ಅಭಿವೃದ್ಧಿ ಪಡಿಸುವುದು ಮತ್ತು ಚರಂಡಿ ನಿರ್ಮಿಸುವುದು 19.00) .ಲಕ್ಷ(<br>ಬಿ (ವಾರ್ಡ್ ನಂ 22 .ರ ಜನತಾ ಕಾಲೋನಿ ಕೆ.ಇ.ಬಿ ಕಾಂಪೌಂಡ್ ವರೆಗೆ ಹಾಲಿ ಇರುವ ಮಣ್ಣಿನ ರಸ್ತೆ ಜಲ್ಲಿ ರಸ್ತೆ ಹಾಗೂ ಡಾಂಬರ್ ರಸ್ತೆಗಳನ್ನು ಉನ್ನತ್ತೀಕರಣ ಹಾಗೂ ಕಿರಿದಾದ ರಸ್ತೆಗಳನ್ನು ಅಭಿವೃದ್ಧಿ ಪಡಿಸುವುದು ಮತ್ತು ಚರಂಡಿ ನಿರ್ಮಿಸುವುದು 22.30 ).ಲಕ್ಷಗಳು(<br>ಸಿ (ವಾರ್ಡ್ ನಂ 21 .ರ ಕೊತ್ತಿಪುರ ಮತ್ತು ಅರ್ಕೇಶ್ವರ ಕಾಲೋನಿಯಲ್ಲಿ ಇರುವ ಮಣ್ಣಿನ ರಸ್ತೆ ಜಲ್ಲಿ ರಸ್ತೆ ಹಾಗೂ ಡಾಂಬರ್ ರಸ್ತೆಗಳನ್ನು ಉನ್ನತ್ತೀಕರಣ ಹಾಗೂ ಕಿರಿದಾದ ರಸ್ತೆಗಳನ್ನು ಅಭಿವೃದ್ಧಿ ಪಡಿಸುವುದು 19.50)ಲಕ್ಷ(<br>ಡಿ (ವಾರ್ಡ್ ನಂ 20 .ರ ತುರುಪಲಾಯದಲ್ಲಿ ಹಾಲಿ ಇರುವ ಮಣ್ಣಿನ ರಸ್ತೆ ಜಲ್ಲಿ ರಸ್ತೆ ಹಾಗೂ ಡಾಂಬರ್ ರಸ್ತೆಗಳನ್ನು ಉನ್ನತ್ತೀಕರಣ ಹಾಗೂ ಕಿರಿದಾದ ರಸ್ತೆಗಳನ್ನು ಅಭಿವೃದ್ಧಿ ಪಡಿಸುವುದು ಮತ್ತು ಚರಂಡಿ | 115.23 | ಕೆ.ಪಿ . ಬೈರೇಗೌಡ | 115.23 | ಸಿಂಗಲ್ ಟೆಂಡರ್ | ಎಸ್.ಆರ್ ದರಕ್ಕೆ |

| | | | | | | |
|---|---|---|---|---|---|---|
| | ನಿರ್ಮಿಸುವುದು 56.05 ).ಲಕ್ಷಗಳು | | | | | |
| 4 | ವಾರ್ಡ್ ನಂ 23 .ರ ಟಿಪ್ಪುನಗರದಲ್ಲಿ ಹಾಲಿ ಇರುವ ಮಣ್ಣಿನ ರಸ್ತೆ ಜಲ್ಲಿ ರಸ್ತೆ ಹಾಗೂ ಡಾಂಬರ್ ರಸ್ತೆಗಳನ್ನು ಉನ್ನತ್ತೀಕರಣ ಹಾಗೂ ಕಿರಿದಾದ ರಸ್ತೆಗಳನ್ನು ಅಭಿವೃದ್ಧಿ ಪಡಿಸುವುದು ಮತ್ತು ಚರಂಡಿ ನಿರ್ಮಿಸುವುದು. | 145.55 | ಕೆ.ಪಿ . ಬೈರೇಗೌಡ | 145.37 | ಸಿಂಗಲ್ ಟೆಂಡರ್ | ಎಸ್.ಆರ್ ದರಕ್ಕೆ ಶೇ . 0.12% ಕಡಿಮ |
| 7 | ವಾರ್ಡ್ ನಂ 4,5,6,7 .ರ ಗಾಂಧಿನಗರ , ಕಾಯಿಸೊಪ್ಪಿನಬೀದಿ ,ಚಾಮುಂಡೇಶ್ವರಿ ಬಡಾವಣೆ , ಅಗ್ರಹಾರ ಹಳೇ ಬಿ.ಎಂ .ರಸ್ತೆಯಿಂದ ರಂಗ ಮಂಟಪದವರೆಗೆ ಹಾಲಿ ಇರುವ ಮಣ್ಣಿನ ರಸ್ತೆ ಜಲ್ಲಿ ರಸ್ತೆ ಹಾಗೂ ಡಾಂಬರ್ ರಸ್ತೆಗಳನ್ನು ಉನ್ನತ್ತೀಕರಣ ಹಾಗೂ ಕಿರಿದಾದ ರಸ್ತೆಗಳನ್ನು ಅಭಿವೃದ್ಧಿ ಪಡಿಸುವುದು ಮತ್ತು ಚರಂಡಿ ನಿರ್ಮಿಸುವುದು | 103.45 | ಎಲ್ . ಉಮಾ ಶಂಕರ್ | 103.45 | ಸಿಂಗಲ್ ಟೆಂಡರ್ | ಎಸ್.ಆರ್ ದರಕ್ಕೆ |
| 8 | ವಾರ್ಡ್ ನಂ 1 .ಮತ್ತು 2 ರ ಮಾರುತಿನಗರ ,ಉತ್ತರ ಬಡಾವಣೆ ,ವಿನಾಯಕನಗರ ,ಚಾಮುಂಡಿಪುರ ಮತ್ತು ಪೌರ ಕಾರ್ಮಿಕರ ಕಾಲೋನಿಯಲ್ಲಿ ಹಾಲಿ ಇರುವ ಮಣ್ಣಿನ ರಸ್ತೆ ಜಲ್ಲಿ ರಸ್ತೆ ಹಾಗೂ ಡಾಂಬರ್ ರಸ್ತೆಗಳನ್ನು ಉನ್ನತ್ತೀಕರಣ ಹಾಗೂ ಕಿರಿದಾದ ರಸ್ತೆಗಳನ್ನು ಅಭಿವೃದ್ಧಿ ಪಡಿಸುವುದು ಮತ್ತು ಚರಂಡಿ ನಿರ್ಮಿಸುವುದು. | 179.20 | ಎಸ್ . ಬೈರೇಗೌಡ | 179.18 | ಸಿಂಗಲ್ ಟೆಂಡರ್ | ಎಸ್.ಆರ್ ದರಕ್ಕೆ ಶೇ . 0.01% ಕಡಿಮೆ |

**<u>ತಾಂತ್ರಿಕ ಬಿಡ್ ನಲ್ಲಿ ಅರ್ಹತೆ ಹೊಂದದಿರುವ ಟೆಂಡರ್ ಗಳು</u>**

| ಪ್ಯಾಕೇಜ್ ನಂ. | ಕಾಮಗಾರಿ ವಿವರ ಮತ್ತು ಅಂದಾಜು | ಟೆಂಡರ್ ಸಲ್ಲಿಸಲಿರುವ ಗುತ್ತಿಗೆದಾರರ ಹೆಸರು | ತಾಂತ್ರಿಕ ಬಿಡ್ ನ ಅರ್ಹತೆ / ಅನರ್ಹತೆ |
|---|---|---|---|
| 2. | ಎ (ವಾರ್ಡ್ ನಂ23 .ರ ಟಿಪ್ಪುನಗರ ಮಾವಿನ ತೋಪಿನಲ್ಲಿ ಹಾಲಿ ಇರುವ ಮಣ್ಣಿನ ರಸ್ತೆ ಜಲ್ಲಿ ರಸ್ತೆ ಹಾಗೂ ಡಾಂಬರ್ ರಸ್ತೆಗಳನ್ನು ಉನ್ನತ್ತೀಕರಣ ಹಾಗೂ ಕಿರಿದಾದ ರಸ್ತೆಗಳನ್ನು ಅಭಿವೃದ್ಧಿ ಪಡಿಸುವುದು ಮತ್ತು ಚರಂಡಿ ನಿರ್ಮಿಸುವುದು 99.10 ). ಲಕ್ಷಗಳು(<br>ಬಿ (ವಾರ್ಡ್ ನಂ 24 .ರ ಯಾರಬ್ ನಗರ 2ನೇ ಬ್ಲಾಕಿನಲ್ಲಿ ಹಾಲಿ ಇರುವ ಮಣ್ಣಿನ ರಸ್ತೆ ಜಲ್ಲಿ ರಸ್ತೆ ಹಾಗೂ ಡಾಂಬರ್ ರಸ್ತೆಗಳನ್ನು ಉನ್ನತ್ತೀಕರಣ ಹಾಗೂ ಕಿರಿದಾದ ರಸ್ತೆಗಳನ್ನು ಅಭಿವೃದ್ಧಿ ಪಡಿಸುವುದು ಮತ್ತು ಚರಂಡಿ ನಿರ್ಮಿಸುವುದು 97.53 ). ಲಕ್ಷಗಳು( | ಶ್ರೀ .ಪ್ರಕಾಶ್, ತಮ್ಮನಾಯಕನಹಳ್ಳಿ, ಕೈಲಾಂಚ ಹೋಬಳಿ , ರಾಮನಗರ ತಾ,. | **ಸಿಂಗಲ್ ಟೆಂಡರ್**<br>ಟೆಂಡರ್ ಗುತ್ತಿಗೆದಾರರು ಷರತ್ತಿನಂತೆನಿಗಧಿಪಡಿಸಿರುವ ಅರ್ಹತೆ ವಹಿವಾಟಿನಲ್ಲಿ ವಾರ್ಷಿಕ .ಹೊಂದಿರುವುದಿಲ್ಲ |
| 3. | ಎ (ವಾರ್ಡ್ ನಂ18 .ರ ಪೂಲ್ ಬಾಗ್ ಬಡಾವಣೆಯಲ್ಲಿ ಹಾಲಿ ಇರುವ ಮಣ್ಣಿನ ರಸ್ತೆ ಜಲ್ಲಿ ರಸ್ತೆ ಹಾಗೂ ಡಾಂಬರ್ ರಸ್ತೆಗಳನ್ನು ಉನ್ನತ್ತೀಕರಣ ಹಾಗೂ ಕಿರಿದಾದ ರಸ್ತೆಗಳನ್ನು ಅಭಿವೃದ್ಧಿ ಪಡಿಸುವುದು ಮತ್ತು ಚರಂಡಿ ನಿರ್ಮಿಸುವುದು 94.40 ). ಲಕ್ಷಗಳು(<br>ಬಿ (ವಾರ್ಡ್ ನಂ 19 .ರ ಮೆಹಬೂಬ್ ನಗರ ಹಾಲಿ ಇರುವ ಡಾಂಬರೀಕರಣ ರಸ್ತೆಯನ್ನು ಉನ್ನತ್ತೀಕರಿಸುವುದು ಮತ್ತು ಕಿರಿದಾದ ರಸ್ತೆಗಳನ್ನು ಅಭಿವೃದ್ಧಿ ಪಡಿಸುವುದು 37.35) .ಲಕ್ಷಗಳು( | ಶ್ರೀ.ಜೆ .ಜಗದೀಶ್, ಜಾಲಮಂಗಲ ರಸ್ತೆ,ಹನುಮಂತನಗರ, ರಾಮನಗರ | **ಸಿಂಗಲ್ ಟೆಂಡರ್**<br>ಗುತ್ತಿಗೆದಾರರು ಟೆಂಡರ್ ಷರತ್ತಿನಂತೆನಿಗಧಿಪಡಿಸಿರುವ ವಾರ್ಷಿಕ ವಹಿವಾಟಿನಲ್ಲಿ ಅರ್ಹತೆ ಹೊಂದಿರುವುದಿಲ್ಲ |

| | | | |
|---|---|---|---|
| 5. | ಎ (ವಾರ್ಡ್ ನಂ 17 .ರ ಬಾಲಗೇರಿ ಅರಳಿಮರದಿಂದ ಅರ್ಕಾವತಿ ನದಿವರೆಗೆ ಮತ್ತು ಹಕ್ಕುಲ್ಲಾ ಶರೀಫ್ ಮನೆಯಿಂದ ಮಸೀದಿವರೆಗೆ ಹಾಲೀ ಇರುವ ಮಣ್ಣಿನ ರಸ್ತೆ ಜಲ್ಲಿ ರಸ್ತೆ ಹಾಗೂ ಡಾಂಬರ್ ರಸ್ತೆಗಳನ್ನು ಉನ್ನತ್ತೀಕರಣ ಹಾಗೂ ಕಿರಿದಾದ ರಸ್ತೆಗಳನ್ನು ಅಭಿವೃದ್ಧಿ ಪಡಿಸುವುದು ಮತ್ತು ಚರಂಡಿ ನಿರ್ಮಿಸುವುದು 61.00) .ಲಕ್ಷಗಳು(<br>ಬಿ (ವಾರ್ಡ್ ನಂ 14 ,13 .ಮತ್ತು 15ರ ಕುಮುಂದಾನ್ ಮೊಹಲ್ಲಾ ,ನಾಲ್ ಬಂದ್ ವಾಡಿ ಮತ್ತು ಮೋತಿನಗರದಲ್ಲಿ ಹಾಲಿ ಇರುವ ಮಣ್ಣಿನ ರಸ್ತೆ ಜಲ್ಲಿ ರಸ್ತೆ ಹಾಗೂ ಡಾಂಬರ್ ರಸ್ತೆಗಳನ್ನು ಉನ್ನತ್ತೀಕರಣ ಹಾಗೂ ಕಿರಿದಾದ ರಸ್ತೆಗಳನ್ನು ಅಭಿವೃದ್ಧಿ ಪಡಿಸುವುದು ಮತ್ತು ಚರಂಡಿ ನಿರ್ಮಿಸುವುದು 58.58).ಲಕ್ಷಗಳು( | ಶ್ರೀ .ಪ್ರಕಾಶ್ ,<br>ತಮ್ಮನಾಯಕನಹಳ್ಳಿ,<br>ಕೈಲಂಚ ಹೋಬಳಿ ,<br>ರಾಮನಗರ ತಾ. | **ಸಿಂಗಲ್ ಟೆಂಡರ್**<br>ಗುತ್ತಿಗೆದಾರರು ಟೆಂಡರ್ ಷರತ್ತಿನಂತೆನಿಗಧಿಪಡಿಸಿರುವ ವಾರ್ಷಿಕ ವಹಿವಾಟಿನಲ್ಲಿ ಅರ್ಹತೆ ಹೊಂದಿರುವುದಿಲ್ಲ |
| 6. | ಎ (ವಾರ್ಡ್ ನಂ 12ನಗರಸಭಾ ಬಡಾವಣೆಯಲ್ಲಿ ಹಾಲಿ ಇರುವ ಮಣ್ಣಿನ ರಸ್ತೆ ಜಲ್ಲಿ ರಸ್ತೆ ಹಾಗೂ ಡಾಂಬರ್ ರಸ್ತೆಗಳನ್ನು ಉನ್ನತ್ತೀಕರಣ ಹಾಗೂ ಕಿರಿದಾದ ರಸ್ತೆಗಳನ್ನು ಅಭಿವೃದ್ಧಿ ಪಡಿಸುವುದು ಮತ್ತು ಚರಂಡಿ ನಿರ್ಮಿಸುವುದು 61.35 ).ಲಕ್ಷಗಳು(<br>ಬಿ (ವಾರ್ಡ್ ನಂ 11 .ರ ಗೌಸಿಯಾನಗರದಲ್ಲಿ ಹಾಲಿ ಇರುವ ಮಣ್ಣಿನ ರಸ್ತೆ ಜಲ್ಲಿ ರಸ್ತೆ ಹಾಗೂ ಡಾಂಬರ್ ರಸ್ತೆಗಳನ್ನು ಉನ್ನತ್ತೀಕರಣ ಹಾಗೂ ಕಿರಿದಾದ ರಸ್ತೆಗಳನ್ನು ಅಭಿವೃದ್ಧಿ ಪಡಿಸುವುದು ಮತ್ತು ಚರಂಡಿ ನಿರ್ಮಿಸುವುದು 44.35 ).ಲಕ್ಷಗಳು(<br>ಸಿ (ವಾರ್ಡ್ ನಂ 10 .ರ ಮದರ್ ಖಾನ್ ಮೊಹಲ್ಲಾದಲ್ಲಿ ಹಾಲಿ ಇರುವ ಜಲ್ಲಿ ರಸ್ತೆಗೆ ಡಾಂಬರೀಕರಣ ,ಡಾಂಬರ್ ರಸ್ತೆಯನ್ನು ಉನ್ನತ್ತೀಕರಿಸುವುದು ಮತ್ತು ಚರಂಡಿ ನಿರ್ಮಾಣ 32.75)ಲಕ್ಷಗಳು( | ಶ್ರೀ.ಕೆ.ಜೆ.ವಿಶ್ವನಾಥ,<br>ಬಿ.ಎಸ್ .ಕೆ .<br>ಬೆಂಗಳೂರು. | **ಸಿಂಗಲ್ ಟೆಂಡರ್**<br>ಗುತ್ತಿಗೆದಾರರು ಟೆಂಡರ್ ಷರತ್ತಿನಂತೆನಿಗಧಿಪಡಿಸಿರುವ ಕನಿಷ್ಠ ಪರಿಮಾಣ ಮತ್ತು ನಿಗಧಿಪಡಿಸಿರುವ ಯಂತ್ರೋಪಕರಣ ಮತ್ತು ವಾಹನಗಳನ್ನು ಹೊಂದಿರುವ ಬಗ್ಗೆ ದಾಖಲಾತಿಗಳು ಇರುವುದಿಲ್ಲ . ಮತ್ತು ಬ್ಯಾಂಕ್ ಗ್ಯಾರಂಟಿ ಇರುವುದಿಲ್ಲ .ಆದ್ದರಿಂದ ಅರ್ಹತೆ ಹೊಂದಿರುವುದಿಲ್ಲ . |
| .9 | ಎ (ವಾರ್ಡ್ ನಂ 31 .ರ ಅರ್ಚಕರಹಳ್ಳಿ ಮತ್ತು ಹನುಮಂತನಗರದಲ್ಲಿ ಹಾಲಿ ಇರುವ ಮಣ್ಣಿನ ರಸ್ತೆ ಜಲ್ಲಿ ರಸ್ತೆ ಹಾಗೂ ಡಾಂಬರ್ ರಸ್ತೆಗಳನ್ನು ಉನ್ನತ್ತೀಕರಣ ಹಾಗೂ ಕಿರಿದಾದ ರಸ್ತೆಗಳನ್ನು ಅಭಿವೃದ್ಧಿ ಪಡಿಸುವುದು ಮತ್ತು ಚರಂಡಿ ನಿರ್ಮಿಸುವುದು.<br>58.55 )ಲಕ್ಷಗಳು(<br>ಬಿ (ವಾರ್ಡ್ ನಂ 30 .ರ ಮಲ್ಲೇಶ್ವರ ಬಡಾವಣೆಯಲ್ಲಿ ಹಾಲಿ ಇರುವ ಮಣ್ಣಿನ ರಸ್ತೆ ಜಲ್ಲಿ ರಸ್ತೆ ಹಾಗೂ ಡಾಂಬರ್ ರಸ್ತೆಗಳನ್ನು ಉನ್ನತ್ತೀಕರಣ ಹಾಗೂ ಕಿರಿದಾದ ರಸ್ತೆಗಳನ್ನು ಅಭಿವೃದ್ಧಿ ಪಡಿಸುವುದು ಮತ್ತು ಚರಂಡಿ ನಿರ್ಮಿಸುವುದು 78.90 ). ಲಕ್ಷಗಳು(<br>ಸಿ (ವಾರ್ಡ್ ನಂ 29 ,26 ,25 .ರ ಗೀತಾಮಂದಿರ ಬಡಾವಣೆ ,ಹೌಸಿಂಗ್ ಬೋರ್ಡ್ ಕಾಲೋನಿ ,ಮುಸ್ಲಿಂ ಕಾಲೋನಿ ,ಮಂಜುನಾಥನಗರ )ಹನುಮಂತನಗರ (ದಲ್ಲಿ ಹಾಲಿ ಇರುವ ಮಣ್ಣಿನ ರಸ್ತೆ ಜಲ್ಲಿ ರಸ್ತೆ ಹಾಗೂ ಡಾಂಬರ್ ರಸ್ತೆಗಳನ್ನು ಉನ್ನತ್ತೀಕರಣ ಹಾಗೂ ಕಿರಿದಾದ ರಸ್ತೆಗಳನ್ನು ಅಭಿವೃದ್ಧಿ ಪಡಿಸುವುದು ಮತ್ತು ಚರಂಡಿ ನಿರ್ಮಿಸುವುದು 37.80 ).ಲಕ್ಷಗಳು( | ಕೆ.ಜೆ.ವಿಶ್ವನಾಥ,<br>ಬಿ.ಎಸ್ .ಕೆ .<br>ಬೆಂಗಳೂರು<br>. | **ಸಿಂಗಲ್ ಟೆಂಡರ್**<br>ಗುತ್ತಿಗೆದಾರರು ಟೆಂಡರ್ ಷರತ್ತಿನಂತೆನಿಗಧಿಪಡಿಸಿರುವ ಕನಿಷ್ಠ ಪರಿಮಾಣ ಮತ್ತು ನಿಗಧಿಪಡಿಸಿರುವ ಯಂತ್ರೋಪಕರಣ ಮತ್ತು ವಾಹನಗಳನ್ನು ಹೊಂದಿರುವ ಬಗ್ಗೆ ದಾಖಲಾತಿಗಳು ಇರುವುದಿಲ್ಲ . . ಮತ್ತು ಬ್ಯಾಂಕ್ ಗ್ಯಾರಂಟಿ ಇರುವುದಿಲ್ಲ .ಆದ್ದರಿಂದ ಅರ್ಹತೆ ಹೊಂದಿರುವುದಿಲ್ಲ. |

ಮೇಲ್ಕಂಡಂತೆ ವಿವರಿಸಿರುವ ಕಾಮಗಾರಿಗಳಿಗೆ ಸಿಂಗಲ್ ಟೆಂಡರ್ ಮಾತ್ರ ಬಂದಿದ್ದು, ಈ ಪೈಕಿ 5 ಟೆಂಡರ್ ಗಳಿಗೆ ಸಲ್ಲಿಸಿರುವ ಟೆಂಡರ್ ದಾರರು ತಾಂತ್ರಿಕ ಬಿಡ್ ನಲ್ಲಿ ಅರ್ಹತೆ ಹೊಂದದೆ ಇರುವುದರಿಂದ ಹಾಗೂ

ಉಳಿಕೆ ನಾಲ್ಕು ಕಾಮಗಾರಿಗಳಿಗೆ ಬಂದಿರುವ ಟೆಂಡರ್ ಗಳು ತಾಂತ್ರಿಕ ಬಿಡ್ ನಲ್ಲಿ ಅರ್ಹತೆ ಹೊಂದಿದ್ದರೂ ಕೂಡ ಸಿಂಗಲ್ ಟೆಂಡರ್ ಆಗಿರುವುದರಿಂದ ೯ ಕಾಮಗಾರಿಗಳ ಟೆಂಡರ್ ಗಳನ್ನು ರದ್ದುಪಡಿಸಿ ಅಲ್ಪಾವಧಿ ಟೆಂಡರ್ ಕರೆಯುಲು ಮಾನ್ಯ ಜಿಲ್ಲಾಧಿಕಾರಿಗಳಿಗೆ ಪ್ರಸ್ತಾವನೆ ಸಲ್ಲಿಸಲು ಸಭೆಯು ಸರ್ವಾನುಮತದಿಂದ ಒಪ್ಪಿ ತೀರ್ಮಾನಿಸಲಾಯಿತು.

**ವಿ.4.** 2008-09 ನೇ ಸಾಲಿನ ಎಸ್ ಎಫ್ ಸಿ ಅನುದಾನದಡಿಯ 2 ಕಾಮಗಾರಿಗಳಿಗೆ ಸ್ವೀಕರಿಸಿದ ಟೆಂಡರ್ ಗಳನ್ನು ಪರಿಶೀಲಿಸಿ ತೀರ್ಮಾನ ಕೈಗೊಳ್ಳುವ ವಿಚಾರ.

**ತೀ.4** ವಿಷಯವನ್ನು ಸಭೆಗೆ ವಿವರವಾಗಿ ತಿಳಿಸಲಾಯಿತು. ಪಾರದರ್ಶಕ ನಿಯಮ 2000 ರಂತೆ ಈ ಕಛೇರಿಯಿಂದ ಟೆಂಡರ್ ಪ್ರಕಟಣೆ ಸಂ: ನಸರಾ/ಕಾವಿ/ಸಅ/ಸಿಆರ್/೪೦/೦೮-೦೯, ದಿ: ೨೮-೦೨-೨೦೦೯ ರಂತೆ ಕರೆದಿರುವ ಟೆಂಡರ್ ಗೆ ಕೆಳಕಂಡಂತೆ ಬಂದಿರುವ ಟೆಂಡರ್ ಗಳನ್ನು ಸಭೆಗೆ ಮಂಡಿಸಲಾಯಿತು. ಸಭೆಯು ಕೂಲಂಕುಷವಾಗಿ ಚರ್ಚಿಸಿ, ತಾಂತ್ರಿಕವಾಗಿ ಅರ್ಹಗೊಂಡ ಟೆಂಡರ್‌ಗಳನ್ನು ಪರಿಶೀಲಿಸಿ 2008–09 ನೇ ಸಾಲಿನ ಎಸ್.ಆರ್.ದರಕ್ಕಿಂತ ಹೆಚ್ಚಿಗೆ ದರ ನಮೂದಿಸಿ ಟೆಂಡರ್‌ಗಳನ್ನು ಎಸ್.ಆರ್.ದರಕ್ಕೆ ಮಿತಿಗೊಳಿಸಿಗೊಳಿಸಲು ಸಭೆಯು ಸರ್ವಾನುಮತದಿಂದ ಒಪ್ಪಲಾಯಿತು. ಸದರಿ ಟೆಂಡರ್‌ಗಳಿಗೆ ಮಂಜೂರಾತಿ ನೀಡಲು ಮಾನ್ಯ ಜಿಲ್ಲಾಧಿಕಾರಿಗಳಿಗೆ ಪ್ರಸ್ತಾವನೆ ಸಲ್ಲಿಸಲು ತೀರ್ಮಾನಿಸಲಾಯಿತು.

| ಕ್ರ. ಸಂ | ಕಾಮಗಾರಿ ವಿವರ | ಅಂದಾಜು ಮೊತ್ತ | ಟೆಂಡರ್ ಸಲ್ಲಿಸಿರುವ ಗುತ್ತಿಗೆದಾರರ ಹೆಸರು | ಕಡಿಮೆ ದರ ನಮೂದಿಸಿರುವ ಗುತ್ತಿಗೆದಾರರ ಹೆಸರು | ಷರಾ |
|---|---|---|---|---|---|
| 1 | ವಾರ್ಡ್ ನಂ. 30ರ ಐಜೂರು ಬಾಲಗಂಗಾಧರತಿಲಕ್ ಪಾರ್ಕ್‌ನ್ನು ಅಭಿವೃದ್ದಿಪಡಿಸುವುದು. | 15.00 | ಎನ್. ಹರೀಶ್ : ಎಸ್ ಆರ್ ದರಕ್ಕಿಂತ ಶೇ. 10.66 ಹೆಚ್ಚು<br>ಜಿ.ಚಂದ್ರಶೇಖರ್ : ಎಸ್ ಆರ್ ದರಕ್ಕಿಂತ ಶೇ. 13.68 ಹೆಚ್ಚು | ಎನ್. ಹರೀಶ್ : ಎಸ್ ಆರ್ ದರಕ್ಕಿಂತ ಶೇ. 10.66 ಹೆಚ್ಚು | |
| 2 | ವಾರ್ಡ್ ನಂ. 31ರ ಅರ್ಚಕರಹಳ್ಳಿಯಲ್ಲಿ ಅಂಗನವಾಡಿ ಕೇಂದ್ರ ನಿರ್ಮಾಣ. | 3.50 | ಎಚ್.ಆರ್.ಶಿವರಾಮ್ : ಎಸ್ ಆರ್ ದರಕ್ಕಿಂತ ಶೇ. 7.80 ಹೆಚ್ಚು<br>ಎಚ್.ಆರ್ .ವಿರೇಗೌಡ : ಎಸ್ ಆರ್ ದರಕ್ಕಿಂತ ಶೇ. 12.54 ಹೆಚ್ಚು | ಎಚ್.ಆರ್.ಶಿವರಾಮ್ : ಎಸ್ ಆರ್ ದರಕ್ಕಿಂತ ಶೇ. 7.80 ಹೆಚ್ಚು | |

**ವಿ.5.** 12 ನೇ ಹಣಕಾಸು ಯೋಜನೆಯಡಿ ಸ್ವೀಕರಿಸಿದ ಟೆಂಡರ್ ಗಳನ್ನು ಪರಿಶೀಲಿಸಿ ಅನುಮೋದಿಸುವ ವಿಚಾರ.

**ತೀ.5.** 12ನೇ ಹಣಕಾಸು ಯೋಜನೆಯ ವಿವಿಧ ಅನುದಾನಗಳಡಿಯಲ್ಲಿ ಕರೆದಿರುವ ಟೆಂಡರ್‌ಗಳನ್ನು ಈಕೆಳಕಂಡಂತೆ ಸಭೆಗೆ ಓದಿ ತಿಳಿಸಿ ತೀರ್ಮಾನ ಕೈಗೊಳ್ಳಲಾಂಯಿತು.

(ಅ) ಈ ಕಛೇರಿ ಟೆಂಡರ್ ಪ್ರಕಟಣೆ ಸಂಖ್ಯೆ : ನಸರಾ/ತಾವಿ/ಕಿಅ(2)/ಸಿಆರ್/30/2008–09, ದಿ: 17.02.09 ರಂತೆ 12 ನೇ ಹಣಕಾಸು ಅನುದಾನದಡಿಯಲ್ಲಿ 2008–09 ನೇ ಸಾಲಿನ ರಸ್ತೆ ಮತ್ತು ಸೇತುವೆ ನಿರ್ವಹಣೆ ಮತ್ತು ಸಾರ್ವಜನಿಕ ಕಟ್ಟಡ ನಿರ್ವಹಣೆಗಾಗಿ ಬಿಡುಗಡೆಯಾಗಿರುವ ಅನುದಾನಕ್ಕೆ ಪಾರದರ್ಶಕ ನಿಯಮದಂತೆ ಕರೆದಿರುವ ಟೆಂಡರ್‌ಗಳಿಗೆ ಬಂದಿರುವ ಟೆಂಡರ್‌ಗಳನ್ನು ಸಭೆಗೆ ಓದಿ ತಿಳಿಸಲಾಯಿತು. ನಂತರ ಈ ಕೆಳಕಂಡಂತೆ ಕ್ರ.ಸಂ.1,2,3ರ ಕಾಮಗಾರಿಗೆ ಗುತ್ತಿಗೆದಾರರು ನಮೂದಿಸಿರುವ ದರಗಳನ್ನು ಮತ್ತು ಕ್ರ.ಸಂ 6 ರ ಕಾಮಗಾರಿಯನ್ನು ಎಸ್.ಅರ್.ದರಕ್ಕೆ ಮಿತಿಗೊಳಸಿ ಅನುಮೋದಿಸಿ ಮಾನ್ಯ ಜಿಲ್ಲಾಧಿಕಾರಿಗಳಿಂದ 12 ನೇ ಹಣಕಾಸು ಅನುದಾನದ ಮೂರು ಟೆಂಡರ್‌ಗಳಿಗೆ ಮಂಜೂರಾತಿ ಪಡೆಯಲು ಮತ್ತು ಕ್ರ.ಸಂ.4 ಮತ್ತು 5 ಕಾಮಗಾರಿಗೆ ಮರುಟೆಂಡರ್ ಕರೆಯಲು ಸಭೆಯು ಸರ್ವಾನುಮತದಿಂದ ತೀರ್ಮಾನಿಸಲಾಯಿತು.

| ಕ. ಸಂ | ಕಾಮಗಾರಿ ವಿವರ | ಅಂದಾಜು ಮೊತ್ತ (ಲಕ್ಷ ರೂ. ಗಳಲ್ಲಿ | ದರ ನಮೂದಿಸಿರುವ ಗುತ್ತಿಗೆದಾರರ ಹೆಸರು | ಕಡಿಮೆ ದರ ನಮೂದಿಸಿರುವ ಗುತ್ತಿಗೆದಾರರ ಹೆಸರು | ಷರಾ |
|---|---|---|---|---|---|
| 12 ನೇ ಹಣಕಾಸು (ರಸ್ತೆ ಮತ್ತು ಸೇತುವೆ ನಿರ್ವಹಣೆ-2008-09) | | | | | |
| 1 | ವಾರ್ಡ್ .ನಂ.2 ರ ವಿಜಯನಗರ ಕುಮಾರ್ ಮನೆ ಹತ್ತಿರ ಚರಂಡಿ ಮತ್ತು ರಸ್ತೆ ಅಭಿವೃದ್ಧಿಪಡಿಸುವುದು. | 9.10 | 1)ಪಿ.ಪುಟ್ಟಸ್ವಾಮಿ–ಎಸ್.ಆರ್.ದರಕ್ಕಿಂತ ಶೇ.0.12 ರಷ್ಟು ಕಡಿಮೆ 2).ಶಶಿಕಲಾ ಅಸೋಸಿಯೇಟ್ಸ್–ಎಸ್.ಆರ್.ದರಕ್ಕಿಂತ ಶೇ. 8.02 ರಷ್ಟು ಕಡಿಮೆ | ಶಶಿಕಲಾ ಅಸೋಸಿಯೇಟ್ಸ್–ಎಸ್.ಆರ್.ದರಕ್ಕಿಂತ ಶೇ. 8.02 ರಷ್ಟು ಕಡಿಮೆ | ಶಶಿಕಲಾ ಅಸೋಸಿಯೇಟ್ಸ್ –ರವರ ದರವನ್ನು ಒಪ್ಪಲಾಯಿತು. |
| 2 | ವಾರ್ಡ್ ನಂ.19 ರ ಮೆಹಬೂಬ್ ನಗರ ಮಾಜಿ ನಗರಸಭಾ ಸದಸ್ಯರಾದ ಶಫೀವುಲ್ಲಾ ಮನೆಯಿಂದ ಪಿ.ಎಸ್.ವಿ.ಗುಲಾಬ್ ಮನೆವರೆಗೆ ಎರಡು ಕಡೆ ಚರಂಡಿ ನಿರ್ಮಾಣ. | 7.50 | 1).ಕೆ.ರವಿ–ಎಸ್.ಆರ್.ದರಕ್ಕಿಂತ ಶೇ. 5.13 ರಷ್ಟು ಕಡಿಮೆ 2).ಶಶಿಕಲಾ ಅಸೋಸಿಯೇಟ್ಸ್–ಎಸ್.ಆರ್. ದರಕ್ಕಿಂತ ಶೇ. 8.03 ರಷ್ಟು ಕಡಿಮೆ 3).ಪಿ.ಪುಟ್ಟಸ್ವಾಮಿ –ಎಸ್.ಆರ್. ದರಕ್ಕಿಂತ ಶೇ. 2.64 ರಷ್ಟು ಹೆಚ್ಚು 4).ಎನ್.ಹರೀಶ್ –ಎಸ್.ಆರ್.ದರಕ್ಕಿಂತ ಶೇ. 5.30 ರಷ್ಟು ಹೆಚ್ಚು. | ಶಶಿಕಲಾ ಅಸೋಸಿಯೇಟ್ಸ್–ಎಸ್.ಆರ್. ದರಕ್ಕಿಂತ ಶೇ. 8.03 ರಷ್ಟು ಕಡಿಮೆ | ಶಶಿಕಲಾ ಅಸೋಸಿಯೇಟ್ಸ್ –ರವರ ದರವನ್ನು ಒಪ್ಪಲಾಯಿತು. |
| 3 | ವಾರ್ಡ್. ನಂ.೧ ರ ಸಿಂಗ್ರಾ ಬಾವಿ ದೊಡ್ಡಿ ಅರಳಿಮರದಿಂದ ರಾಜಣ್ಣ ಮನೆವರೆಗೆ ಚರಂಡಿ ಮತ್ತು ರಸ್ತೆ ಕಾಮಗಾರಿ. | 8.40 | 1).ಶಶಿಕಲಾ ಅಸೋಸಿಯೇಟ್ಸ್–ಎಸ್.ಆರ್. ದರಕ್ಕಿಂತ ಶೇ. 8.01 ರಷ್ಟು ಕಡಿಮೆ 2).ಟಿ.ರಮೇಶ್–ಎಸ್.ಆರ್.ದರಕ್ಕಿಂತ ಶೇ. 7.10 ರಷ್ಟು ಕಡಿಮೆ. 3).ಆರ್.ರಾಜಣ್ಣ –ಎಸ್.ಆರ್.ದರಕ್ಕಿಂತ ಶೇ. 1.13 ರಷ್ಟು ಕಡಿಮೆ. | ಶಶಿಕಲಾ ಅಸೋಸಿಯೇಟ್ಸ್–ಎಸ್.ಆರ್. ದರಕ್ಕಿಂತ ಶೇ. 8.01 ರಷ್ಟು ಕಡಿಮೆ | ಶಶಿಕಲಾ ಅಸೋಸಿಯೇಟ್ಸ್ –ರವರ ದರವನ್ನು ಒಪ್ಪಲಾಯಿತು. |

| | | | | |
|---|---|---|---|---|
| 12 ನೇ ಹಣಕಾಸು (ಸಾರ್ವಜನಿಕ ಕಟ್ಟಡ ನಿರ್ವಹಣೆ -2007-08) | | | | |
| 4 | ವಾರ್ಡ್.ನಂ.7 ರಲ್ಲಿನ ಛತ್ರದ ಬೀದಿಯಲ್ಲಿರುವ ನಗರಸಭೆ ರಂಗಮಂದಿರ ಕಟ್ಟಡ ದುರಸ್ಥಿ ಪಡಿಸುವುದು. | 0.75 | ಟೆಂಡರ್ ಬಂದಿರುವುದಿಲ್ಲ. | ಮರು ಟೆಂಡರ್ ಕರೆಯಲು ತೀರ್ಮಾನಿಸಲಾಯಿತು. |

| | | | | |
|---|---|---|---|---|
| 12 ನೇ ಹಣಕಾಸು ( ಮುಕ್ತ ನಿಧಿ) (ಬಡ್ಡಿ ಹಣ) (2 ನೇ ಕರೆ) | | | | |
| 5 | ವಾರ್ಡ್.ನಂ.2 ರ ಅಂಬೇಡ್ಕರ್ ನಗರದಲ್ಲಿ ಡೆಕ್ ಸ್ಲಾಬ್ ನಿರ್ಮಾಣ. | 0.06 | ಟೆಂಡರ್ ಬಂದಿರುವುದಿಲ್ಲ. | ಮರು ಟೆಂಡರ್ ಕರೆಯಲು ತೀರ್ಮಾನಿಸಲಾಯಿತು. |

**(ಆ) 12 ನೇ ಹಣಕಾಸು ಡೇಟಾ ಬೇಸ್ ಅನುದಾನ**

12 ನೇ ಹಣಕಾಸು ಅನುದಾನದಡಿಯಲ್ಲಿ ಡೇಟಾ ಬೇಸ್ ಉನ್ನತಿಕರಣಕ್ಕಾಗಿ ಬಿಡುಗಡೆಯಾಗಿರುವ ಅನುದಾನದಡಿಯಲ್ಲಿ ಕರೆಯಲಾಗಿದ್ದ ಈ ಕಛೇರಿ ಟೆಂಡರ್/ಕೋಟೇಷನ್ ಪ್ರಕಟಣೆ ಸಂಖ್ಯೆ: ನಸರಾ/ಜೆಇ(ಇಲೆ)/ಸಿಆರ್/29/2007-08, ದಿ: 13.02.2009 ಗೆ ಬಂದಿರುವ ಟೆಂಡರ್/ಕೋಟೆಷನ್‌ಗಳನ್ನು ಓದಿ ತಿಳಿಸಲಾಯಿತು. ವಿಷಯವನ್ನು ಪರಿಶೀಲಿಸಿದ ನಂತರ ಕೆಳಕಂಡಂತೆ ತೀರ್ಮಾನ ಗೊಳ್ಳಲಾಯಿತು.

(1) **ಯುಪಿಎಸ್. ಖರೀದಿಗಾಗಿ**: ವಿಷಯವನ್ನು ಪರಿಶೀಲಿಸಲಾಯಿತು. 12 ನೇ ಹಣಕಾಸು ಯೋಜನೆಯ ಚಾಟಾ ಬೇಸ್ ಅನುದಾನದಲ್ಲಿ ಯು.ಪಿ.ಎಸ್. ಖರೀದಿಗಾಗಿ ಬಂದಿರುವ ಟೆಂಡರ್ ಗಳನ್ನು ಪರಿಶೀಲಿಸಲಾಯಿತು. ಕೇವಲ ಒಬ್ಬ ಗುತ್ತಿಗೆದಾರರು ಅರ್ಹವಾಗಿದ್ದು, ಸ್ವರ್ದಾತ್ಮಕ ದರಗಳು ಲಭ್ಯವಿಲ್ಲದ ಕಾರಣ ಸದರಿ ಟೆಂಡರ್ ರದ್ದುಪಡಿಸಲು ಸಭೆಯು ತೀರ್ಮಾನಿಸಿತು. ನಂತರ ಕಿರಿಯ ಅಬಿಯಂತರರು(ವಿದ್ಯುತ್) ರವರು ಸಭೆಗೆ ಡಿ.ಜಿ.ಎಸ್. ಅಂಡ್ ಡಿ ದರ ಅನುಮೋಧನೆ ಆಗಿರುವುದನ್ನು ವಿವರಿಸಿದರು. 2009 – 10 ನೇ ಸಾಲಿಗೆ 10 ಕೆ . ವಿ.ಎ. ಅನ್ ಲೈನ್ ಯು.ಪಿ.ಎಸ್ ಗೆ ಡಿ.ಜಿ.ಎಸ್. ಅಂಡ್ ಡಿ ದರಗಳು ಲಭ್ಯವಿದ್ದು, ನಂತರ ಸಭೆಯು ನಿಗಧಿಪಡಿಸಿರುವ ಮೊತ್ತಕ್ಕೆ ಅನುಗುಣವಾಗಿರುವುದರಿಂದ ಡಿ.ಜಿ.ಎಸ್. ಅಂಡ್ ಡಿ ದರದಲ್ಲಿ ಖರೀದಿಸುವುದೆಂದು ಹಳೇಯ 4 ಕೆ. ವಿ. ಎ ಯು. ಪಿ. ಎಸ್ ನ್ನು ದುರಸ್ಥಿ ಪಡಿಸಿ ನಗರಸಭಾ ಪ್ರಶಸ್ತಿ ಭವನಕ್ಕೆ ಉಪಯೋಗಿಸಿಕೊಳ್ಳಬಹುದೆಂದು ತೀರ್ಮಾನಿಸಿ ಕ್ರಮಕೈಗೊಳ್ಳುವಂತೆ ಸಭೆಯು ಸರ್ವಾನುಮತದಿಂದ ಒಪ್ಪಿಗೆ ನೀಡಿತು.

(2) **ಗಣಕಯಂತ್ರ ವಿಭಾಗಕ್ಕೆ ಪೀಠೋಪಕರಣ ಸರಬರಾಜು:-** ಗಣಕಯಂತ್ರ ಶಾಖೆಗೆ ಪೀಠೋಪಕರಣಗಳ ಖರೀದಿಗಾಗಿ 3 ಟೆಂಡರ್/ಕೋಟೇಷನ್‌ಗಳು ಬಂದಿದ್ದು ಈ ಪೈಕಿ ಮೆ॥ ಟೆಕ್ನೋ ಸೀಟಿಂಗ್ಸ್,ಬೆಂಗಳೂರು ರವರು ಕಡಿಮೆ ದರ ರೂ. 3,150/- Unit ನಮೂದಿಸಿದ್ದು ಸದರಿಯವರ ದರವನ್ನು ಒಪ್ಪಿ ಕಾಯ್ದಿರಿಸಲಾಗಿರುವ ರೂ. 50,000/-ಗಳಿಗೆ ಅನುಗುಣವಾಗಿ ಪೀಠೋಪಕರಣ ಖರೀದಿಸುವುದೆಂದು ಸಭೆಯು ಸರ್ವಾನುಮತದಿಂದ ತೀರ್ಮಾನಕ್ಕೈಗೊಳ್ಳಲಾಯಿತು.

(3) **ಕೆ.ಎಂ.ಎಫ್.ವಹಿಗಳ ಖರೀದಿ:** ಈ ಸಂಬಂಧ ಎರಡು ಟೆಂಡರ್/ಕೋಟೆಷನ್‌ಗಳು ಬಂದಿದ್ದು ಈ ಪೈಕಿ ಮೆ॥ ಹಿರೆಕೆರೂರು ಪಿಂಟರ್ಸ್, ಹಿರೆಕೆರೂರು ರವರು ಕಡಿಮೆ ದರ ನಮೂದಿಸಿದ್ದು ಸದರಿಯವರ ದರ ಒಪ್ಪಿ ಅನುಮೋದನೆ ನೀಡಲಾಯಿತು.

**ವಿ.6.** 12ನೇ ಹಣಕಾಸು ಯೋಜನೆಯಡಿ 2009-10ನೇ ಸಾಲಿಗೆ ಬಿಡುಗಡೆಯಾಗುವ ಅನುದಾನಕ್ಕೆ ಕ್ರಿಯಾ ಯೋಜನೆ ತಯಾರಿಸುವ ವಿಚಾರ.

**ತೀ.6.** 2009-10 ನೇ ಸಾಲಿನ 12 ನೇ ಸಾಲಿನ ಆಯೋಗದಡಿ ರಸ್ತೆ ಮತ್ತು ಸೇತುವೆಗಳ ನಿರ್ವಹಣೆಯ ಅನುದಾನದಲ್ಲಿ ನಗರಸಭೆಗೆ ನಿಗಧಿ ಪಡಿಸಿರುವ ರೂ. 25.00 ಲಕ್ಷಗಳಿಗೆ , ಸಾರ್ವಜನಿಕ ಕಟ್ಟಡಗಳ ನಿರ್ವಹಣೆಗಾಗಿ ನಗರಸಭೆಗೆ ನಿಗಧಿಪಡಿಸಿರುವ ರೂ. 0.75 ಲಕ್ಷಗಳಿಗೆ, ಮುಕ್ತನಿಧಿ ಅನುದಾನ (1ನೇ ಕಂತು) ರೂ. 6.08 ಲಕ್ಷಗಳಿಗೆ ಮತ್ತು ಮುಕ್ತನಿಧಿ ಅನುದಾನ (2ನೇ ಕಂತು) ರೂ. 6.08 ಲಕ್ಷಗಳಿಗೆ ಕ್ರಿಯಾ ಯೋಜನೆ ತಯಾರಿಸಿ ಸಭೆಯಲ್ಲಿ ಓದಿ ತಿಳಿಸಲಾಯಿತು. ಹಾಗೂ ಈ ಕೆಳಕಂಡಂತೆ ತಯಾರಿಸಿರುವ ಕ್ರಿಯಾಯೋಜನೆಯನ್ನು ಮಾನ್ಯ ಜಿಲ್ಲಾಧಿಕಾರಿಗಳಿಗೆ ಸಲ್ಲಿಸಿ ಆಡಳಿತಾತ್ಮಕ ಅನುಮೋದನೆ ಪಡೆಯಲು ಸಭೆಯು ಸರ್ವಾನುಮತದಿಂದ ತೀರ್ಮಾನಿಸಿತು.

### 2009-10 ನೇ ಸಾಲಿನ 12 ನೇ ಸಾಲಿನ ಆಯೋಗದಡಿ ರಸ್ತೆ ಮತ್ತು ಸೇತುವೆಗಳ ನಿರ್ವಹಣೆ

| ಕ್ರ. ಸಂ. | ಕಾಮಗಾರಿ ಹೆಸರು | ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ) |
|---|---|---|
| 1. | ವಾರ್ಡ್ ನಂ. 2 ರಲ್ಲಿ ಕೊಂಕಾಣಿ ದೊಡ್ಡಿಯಲ್ಲಿ ಚರಂಡಿ ನಿರ್ಮಾಣ | 2.50 |
| 2. | ವಾರ್ಡ್ ನಂ. 4 ರಲ್ಲಿ ಕಮಲಮ್ಮ ರವರ ಮನೆ ಮುಂದೆ ಚರಂಡಿ ಹಾಗೂ ಡೆಕ್ ಸ್ಲಾಬ್ ನಿರ್ಮಾಣ | 1.75 |
| 3. | ವಾರ್ಡ್ ನಂ. 7 ರಲ್ಲಿ ಅಗ್ರಹಾರ ಬಡಾವಣೆಯಲ್ಲಿ ವೆಂಕಟೇಶ್ ಮೊದಲಿಯಾರ್ ರವರ ಮನೆ ಹತ್ತಿರ ಕಾಂಕ್ರೀಟ್ ರಸ್ತೆ ಹಾಗೂ ಚರಂಡಿ ನಿರ್ಮಾಣ. | 1.00 |
| 4. | ವಾರ್ಡ್ ನಂ. 9 ರಲ್ಲಿ ಸುಶೀಲ ಬಾಯಿ ರವರ ಮನೆಯಿಂದ ಕುನ್ನಪ್ಪರವರ ಮನೆವರೆಗೆ ಚರಂಡಿ ನಿರ್ಮಾಣ. | 2.25 |
| 5. | ವಾರ್ಡ್ ನಂ. 11 ರ ತುರುಪಲಾಯದ ಹುಣಸನಹಳ್ಳಿ ರಸ್ತೆಯಿಂದ ಹೆಚ್ . ಮುನೀರ್ ಮನೆವರೆಗೆ ರಸ್ತೆ ಮತ್ತು ಚರಂಡಿ ಕಾಮಗಾರಿ. | 9.98 |
| 6. | ವಾರ್ಡ್ ನಂ. 25 ರ ಹನುಮಂತನಗರ ಸಣ್ಣಮ್ಮನ ಮನೆ ರಸ್ತೆ ಮತ್ತು ಸರ್ಕಾರಿ ಶಾಲೆ ಹತ್ತಿರ ಚರಂಡಿ ಮತ್ತು ರಸ್ತೆ ಅಬಿವೃದ್ಧಿ ಪಡಿಸುವುದು. | 7.52 |
| | **ಒಟ್ಟು ರೂ.** | **25.00** |

### 2009-10 ನೇ ಸಾಲಿನ 12 ನೇ ಸಾಲಿನ ಆಯೋಗದಡಿ ಸಾರ್ವಜನಿಕ ಕಟ್ಟಡಗಳ ನಿರ್ವಹಣೆ

| ಕ್ರ. ಸಂ. | ಕಾಮಗಾರಿ ಹೆಸರು | ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ ) |
|---|---|---|
| 1. | ರಾಮನಗರ ನಗರಸಭೆಯ ಪ್ರಶಸ್ತಿ ಭವನದ ಮೊದಲನೇ ಅಂತಸ್ತಿನ ಆರ್ ಆರ್ ಸಿ ಛಾವಣಿಯ ಮೇಲೆ ಯಲಹಂಕ ಟೈಲ್ಸ್ ಅಳವಡಿಸುವ ಕಾಮಗಾರಿ | 0.75 |

**12 ನೇ ಹಣಕಾಸು ಮುಕ್ತನಿಧಿ (1ನೇ ಕಂತು) (6.08 ಲಕ್ಷ)**

| ಕ್ರ. ಸಂ. | ಕಾಮಗಾರಿ ಹೆಸರು | ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ ) |
|---|---|---|
| 1. | ವಾರ್ಡ್.ನಂ.5 ರಲ್ಲಿ ಚಾಮುಂಡೇಶ್ವರಿ ಬಡಾವಣೆ ಸಂಜೀವಪ್ಪನವರ ತೋಟದ ರಸ್ತೆಯಲ್ಲಿ ಚರಂಡಿ ಮತ್ತು ನರಸಿಂಹಯ್ಯರವರ ಮನೆ ಪಕ್ಕದಲ್ಲಿ ಕಾಂಕ್ರೀಟ್ ರಸ್ತೆ ನಿರ್ಮಾಣ. | 3.58 |
| 2. | ವಾರ್ಡ್.ನಂ.6 ರಲ್ಲಿ ಹೊಳೆ ರಸ್ತೆಯಲ್ಲಿ ಲಕ್ಷ್ಮೀನಾರಾಯಣಸ್ವಾಮಿ ದೇವಸ್ಥಾನದ ಮುಂಭಾಗ ಮತ್ತು ನಾಗಭೂಷಣ ಅಂಗಡಿ ರಸ್ತೆಯಲ್ಲಿ ಚರಂಡಿ ನಿರ್ಮಾಣ. | 2.50 |

**12 ನೇ ಹಣಕಾಸು ಮುಕ್ತನಿಧಿ (2ನೇ ಕಂತು) (6.08 ಲಕ್ಷ)**

| ಕ್ರ. ಸಂ. | ಕಾಮಗಾರಿ ಹೆಸರು | ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ ) |
|---|---|---|
| 1. | ವಾರ್ಡ್.ನಂ.26 ರ ಗೀತಾ ಮಂದಿರ ಬಡಾವಣೆಯ ಬಸವರಾಜು ಮನೆಯ ರಸ್ತೆ ಗುರು ಶ್ಯಾಮಿಯಾನ ಹತ್ತಿರ ಹಾಗೂ ಶಿವಕುಮಾರ್ ಬೇಕರಿ ಮುಂದೆ ಚರಂಡಿ ನಿರ್ಮಾಣ ಕಾಮಗಾರಿ. | 2.58 |
| 2. | ವಾರ್ಡ್.ನಂ.20 ರಲ್ಲಿನ ಜಿಯಾ ಬ್ಲಾಕ್‌ನ ಮಸೀದಿ ಹತ್ತಿರ ಚರಂಡಿ ನಿರ್ಮಾಣ. | 3.50 |

| ನಗರಸಭಾ ನಿಧಿ (2008-09) | | | | | |
|---|---|---|---|---|---|
| 6 | ವಾರ್ಡ್.ನಂ.1 ರಲ್ಲಿ ಗಾಂಧೀನಗರ ಉತ್ತರ ಬಡಾವಣೆಯಲ್ಲಿ ಶ್ರೀಮತಿ ಕಮಲಮ್ಮರವರ ಮನೆಯ ಪಕ್ಕದಿಂದ ದೊಡ್ಡ ಮೋರಿಯವರೆಗೆ ಚರಂಡಿ ನಿರ್ಮಾಣ. | 0.70 | 1).ಆರ್.ಶ್ರೀನಿವಾಸ್- ಎಸ್.ಆರ್. ದರಕ್ಕಿಂತ ಶೇ. 5.00 ರಷ್ಟು ಹೆಚ್ಚು 2).ವಿ.ನಾರಾಯಣ್- ಎಸ್.ಆರ್.ದರಕ್ಕಿಂತ ಶೇ. 10.85 ರಷ್ಟು ಹೆಚ್ಚು | ಆರ್.ಶ್ರೀನಿವಾಸ್- ಎಸ್.ಆರ್. ದರಕ್ಕಿಂತ ಶೇ. 5.00 ರಷ್ಟು ಹೆಚ್ಚು | ಆರ್.ಶ್ರೀನಿವಾಸ್- ಎಸ್.ಆರ್.ದರಕ್ಕೆ |

**ವಿ.**7. ನಗರಸಭೆಗೆ ಜೆಸಿಬಿ ಯಂತ್ರ ಖರೀದಿಗೆ ಸ್ವೀಕರಿಸಿದ ಟೆಂಡರ್ ಜಿಲ್ಲಾಧಿಕಾರಿಗಳಿಂದ ಅನುಮೋದನೆಯಾಗಿದ್ದು, 2 ವರ್ಷಗಳ ಅವಧಿಗೆ ನಿರ್ವಹಣಾ ವೆಚ್ಚದ ಬಗ್ಗೆ ಚರ್ಚಿಸಿ ತೀರ್ಮಾನ ಕೈಗೊಳ್ಳುವ ವಿಚಾರ.

**ತೀ.7.**ವಿಷಯದ ಬಗ್ಗೆ ಕೂಲಂಕುಷವಾಗಿ ಚರ್ಚಿಸಲಾಗಿ ಟೆಲ್ಕೋ ಕಂಪನಿರವರು ಜಿಲ್ಲಾಧಿಕಾರಿಗಳ ಷರತ್ತಿನಂತೆ 2 ವರ್ಷಗಳು ಅವಧಿಗೆ ಅಂದರೆ ವಾರಂಟಿ ಅವಧಿಯ ಜೊತೆಗೆ 12 ತಿಂಗಳುಗಳ ಕಾಲ ಹೆಚ್ಚುವರಿಯಾಗಿ ಟೆಂಡರ್ ಮೊತ್ತಕ್ಕೆ ವಾಹನದ ಸರ್ವೀಸ್ ಮಾಡಲು ಒಪ್ಪಿರುವುದರಿಂದ ಜಿಲ್ಲಾಧಿಕಾರಿಗಳವರಿಂದ ಅನುಮತಿ ಪಡೆದು ಟೆಲ್ಕೋ ಕಂಪನಿರವರಿಗೆ ವಾಹನ ಸರಬರಾಜು ಮಾಡಲು ಆದೇಶ ನೀಡಬಹುದೆಂದು ಸಭೆಯಲ್ಲಿ ಸರ್ವಾನುಮತದಿಂದ ತೀರ್ಮಾನಿಸಲಾಯಿತು.

**ವಿ.8**.ನಗರಸಭೆಯ ಹೀರು ಯಂತ್ರ (ಸೆಕ್ಕಿಂಗ್ ಮಿಷನ್) - ಕೆಎ-42-1689 ಹಾಗೂ ಜೀಪ್ ಕೆಎ-05-ಎನ್-3224 ವಾಹನಗಳ ದುರಸ್ಥಿಗೆ ಬಿಲ್ಲು ಪಾವತಿಯನ್ನು ಅನುಸಮರ್ಥನಗೊಳಿಸುವ ವಿಚಾರ.

**ತೀ.8**.ವಿಷಯವನ್ನು ಸಭೆಯು ಪರಿಶೀಲಿಸಿತು. ಸೆಕ್ಕಿಂಗ್ ಮಿಷನ್ ದುರಸ್ಥಿ ಬಾಬ್ತು 52,046-00 ಮತ್ತು ಜೀಪ್ ರಿಪೇರಿ ಬಾಬ್ತು ರೂ. 28,016-00 ಗಳನ್ನು ಪಾವತಿಸಿರುವುದನ್ನು ಸಭೆಯು ಸರ್ವಾನುಮತ ದಿಂದ ಅನುಸಮರ್ಥನಗೊಳಿಸಲಾಯಿತು.

**ವಿ.9.** ಬರಪರಿಹಾರ ಯೋಜನೆಯಡಿ ಮಾನ್ಯ ಜಿಲ್ಲಾಧಿಕಾರಿಗಳಿಂದ ಬಿಡುಗಡೆಯಾಗುವ ರೂ. 3.50 ಲಕ್ಷ ಅನುದಾನಕ್ಕೆ ಬಾಲಗೇರಿಯಲ್ಲಿ 2 ಕೊಳವೆ ಬಾವಿ ಕೊರೆಸಿ ನೀರು ಸರಬರಾಜು ವ್ಯವಸ್ಥೆಯನ್ನು ಸುಸ್ಥತಿಯಲ್ಲಿಡುವ ವಿಚಾರ ಮತ್ತು ಮಾನ್ಯ ಜಿಲ್ಲಾಧಿಕಾರಿರವರ ಅಧಿಕೃತ ಜ್ಞಾಪನ ಪತ್ರದ ಸಂಖ್ಯೆ. ರಾಜಿಕಾ/ಎಂಯುಎನ್/2/ಸಿಆರ್/367/2008-09, ದಿನಾಂಕ. 20-05-2009 ರ ಮೂಲಕ ಎಸ್. ಎಫ್.ಸಿ ಮುಕ್ತನಿಧಿ ಅನುದಾನ ರೂ. 25.00 ಲಕ್ಷಗಳಲ್ಲಿ 14 ಬೋರ್ ವೆಲ್ ಗಳನ್ನು ಕೊರೆಯಿಸಲು ನೀಡಿರುವ ಅನುಮೋದನೆಯನ್ನು ಸಾರ್ವ ಜನಿಕ ಹಿತದೃಷ್ಟಿಸಿಂದ ಅಲ್ಪಾವಧಿ ಟೆಂಡರ್ ಕರೆಯಲು ಜಿಲ್ಲಾಧಿಕಾರಿಗಳನ್ನು ಕೋರಿಕೊಳ್ಳುವ ವಿಚಾರ.

**ತೀ.9.** ಈ ವಿಚಾರವಾಗಿ ಚರ್ಚಿಸಲಾಗಿ ಕುಡಿಯುವ ನೀರಿನ ವ್ಯವಸ್ಥೆಯನ್ನು ತ್ವರಿತವಾಗಿ ಬಗೆಹರಿಸಲು ಸಾರ್ವಜನಿಕ ಹಿತದೃಷ್ಟಿಯಿಂದ ಅಲ್ಪಾವಧಿ ಟೆಂಡರ್ ಮೂಲಕ ಕಾಮಗಾರಿಗಳನ್ನು ಕೈಗೊಳ್ಳಲು ಅನುಮತಿ ನೀಡುವಂತೆ ಜಿಲ್ಲಾಧಿಕಾರಿಗಳನ್ನು ಕೋರಿಕೊಳ್ಳುವುದೆಂದು ಸರ್ವನುಮತದಿಂದ ತೀರ್ಮಾನಿಸಲಾಯಿತು.